ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1540
2. ಸದಸ್ಯರ ಹೆಸರು : ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 18-03-2021
4. ಉತ್ತರಿಸುವವರು : ಮುಖ್ಯಮಂತ್ರಿಗಳು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬೀದಿ ನಾಯಿಗಳಿಗೆ ರೇಬಿಸ್ ಸೋಂಕು ತಗುಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಹೌದು. ಸರ್ಕಾರದ ಗಮನಕ್ಕೆ ಬಂದಿರುತ್ತದೆ.</td></tr>
<tr><td>ಆ</td><td>ಇದುವರೆವಿಗೂ ಎಷ್ಟು ಬೀದಿ ನಾಯಿಗಳಿಗೆ ಈ ರೇಬಿಸ್ ಸೋಂಕು ಇರುವುದನ್ನು ದೃಢಪಡಿಸಲಾಗಿದೆ; (ವಲಯವಾರು ಮಾಹಿತಿಯನ್ನು ನೀಡುವುದು)</td><td>ಬಿಬಿಎಂಪಿ ವ್ಯಾಪ್ತಿಯಲ್ಲಿ ಬೀದಿ ನಾಯಿಗಳಿಗೆ ರೇಬಿಸ್ ಸೋಂಕು ದೃಢಪಟ್ಟಿದ್ದು, ವಲಯವಾರು ಮಾಹಿತಿಯು ಈ ಕೆಳಕಂಡಂತಿದೆ.
<table>
<tr><th>ಕ್ರ.ಸಂ.</th><th>ವಲಯ</th><th>ಸೋಂಕು ದೃಢಪಟ್ಟಿರುವ ಬೀದಿನಾಯಿಗಳ ಸಂಖ್ಯೆ</th></tr>
<tr><td>1.</td><td>ಮಹದೇವಪುರ</td><td>16</td></tr>
<tr><td>2.</td><td>ಯಲಹಂಕ</td><td>15</td></tr>
<tr><td>3.</td><td>ರಾಜರಾಜೇಶ್ವರಿನಗರ</td><td>16</td></tr>
<tr><td>4.</td><td>ಬೊಮ್ಮನಹಳ್ಳಿ</td><td>25</td></tr>
<tr><td>5.</td><td>ಪೂರ್ವ</td><td>45</td></tr>
<tr><td>6.</td><td>ಪಶ್ಚಿಮ</td><td>9</td></tr>
<tr><td>7.</td><td>ದಕ್ಷಿಣ</td><td>13</td></tr>
<tr><td>8.</td><td>ದಾಸರಹಳ್ಳಿ</td><td>5</td></tr>
<tr><td colspan="2">ಒಟ್ಟು</td><td>144</td></tr>
</table></td></tr>
</table>

ಇ | ಬೀದಿ ನಾಯಿಗಳಿಗೆ ರೇಬಿಸ್ ಸೋಂಕು ತಡೆಯಲು ಸರ್ಕಾರವು ಯಾವ ಕ್ರಮ ಕೈಗೊಂಡಿರುತ್ತದೆ?

ಬೀದಿ ನಾಯಿಗಳಿಗೆ ರೇಬಿಸ್ ಸೋಂಕು ತಡೆಯಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.

1. ಬೀದಿ ನಾಯಿಗಳಲ್ಲಿ ರೇಬಿಸ್ ಸೋಂಕು ತಡೆಯಲು ಪ್ರತ್ಯೇಕ ಬಿಬಿಎಂಪಿ ರೇಬಿಸ್ ಸಹಾಯವಾಣಿ ಸಂಖ್ಯೆ: 6364893322 ಅನ್ನು ಸ್ಥಾಪಿಸಲಾಗಿದ್ದು, ಸದರಿ ಸಹಾಯವಾಣಿಯು ಚಾಲ್ತಿಯಲ್ಲಿರುತ್ತದೆ.

2. ರೇಬಿಸ್ ರೋಗಕ್ಕೆ ಸಂಬಂಧಪಟ್ಟ ಲಕ್ಷಣಗಳುಳ್ಳ ಶಂಕಿತ ಬೀದಿ ನಾಯಿಗಳು ಹಾಗೂ ಸಾರ್ವಜನಿಕರನ್ನು ಕಚ್ಚುವ ನಾಯಿಗಳ ಬಗ್ಗೆ ಸಾರ್ವಜನಿಕರಿಂದ ದೂರು ಬಂದಲ್ಲಿ ಅಂತಹ ನಾಯಿಗಳನ್ನು ಹಿಡಿದು ಪ್ರತ್ಯೇಕವಾಗಿ ಇರಿಸಿ ನಿಗಾವಹಿಸಲಾಗುವುದು. ಒಂದು ವೇಳೆ ನಿಗಾವಹಿಸಲ್ಪಟ್ಟ ನಾಯಿಗಳು ಮರಣ ಹೊಂದಿದಲ್ಲಿ, ರೇಬಿಸ್ ರೋಗ ದೃಢಪಡಿಸಲು ಮೆದುಳಿನ ಮಾದರಿಯನ್ನು ಪರೀಕ್ಷೆ ಮಾಡಲಾಗುವುದು.

   ಮುಂದುವರೆದು ಸದರಿ ಪರೀಕ್ಷೆಯಲ್ಲಿ ರೇಬಿಸ್ ರೋಗ ದೃಢಪಟ್ಟಿದ್ದಲ್ಲಿ, ಅಂತಹ ನಾಯಿಗಳನ್ನು ಹಿಡಿದ ಸ್ಥಳದಲ್ಲಿ ನಿಯಮಾನುಸಾರ ಸುತ್ತಮುತ್ತಲಿನ ಉಳಿದ ಬೀದಿ ನಾಯಿಗಳಿಗೆ ರೇಬಿಸ್ ರೋಗ ವಿರುದ್ಧ ಲಸಿಕೆಯನ್ನು ಹಾಕಲಾಗುವುದು.

3. ಬಿಬಿಎಂಪಿ ವ್ಯಾಪ್ತಿಯಲ್ಲಿನ ಎಲ್ಲಾ ವಲಯಗಳಲ್ಲಿ ಬೀದಿ ನಾಯಿಗಳನ್ನು ನಿಯಂತ್ರಣಗೊಳಿಸಲು ಸಂತಾನಹರಣ ಶಸ್ತ್ರಚಿಕಿತ್ಸೆ ಕಾರ್ಯಕ್ರಮವು ಪ್ರಗತಿಯಲ್ಲಿರುತ್ತದೆ. ಸದರಿ ಸಂತಾನಹರಣ ಶಸ್ತ್ರಚಿಕಿತ್ಸೆಗೆ ಒಳಪಡುವ ಎಲ್ಲಾ ನಾಯಿಗಳಿಗೂ ಕಡ್ಡಾಯವಾಗಿ ರೇಬಿಸ್ ರೋಗದ ವಿರುದ್ಧ ಲಸಿಕೆಯನ್ನು ಹಾಕಲಾಗುವುದು.

4. ಪಾಲಿಕೆ ವ್ಯಾಪ್ತಿಯಲ್ಲಿನ ಎಲ್ಲಾ ವಲಯಗಳಲ್ಲಿನ ಬೀದಿ ನಾಯಿಗಳಿಗೆ ವಾರ್ಡ್‌ವಾರು ರೇಬಿಸ್ ರೋಗದ ವಿರುದ್ಧ ಲಸಿಕೆಯನ್ನು ಹಾಕುವ ರೇಬಿಸ್ ಲಸಿಕಾ ಅಭಿಯಾನ ಕಾರ್ಯಕ್ರಮವು ಪ್ರಗತಿಯಲ್ಲಿರುತ್ತದೆ. ಸದರಿ ಲಸಿಕಾ ಕಾರ್ಯಕ್ರಮವನ್ನು ನಿರಂತರವಾಗಿ ವಾರ್ಡ್‌ವಾರು ಎಲ್ಲಾ ವಲಯಗಳಲ್ಲಿ ನಿರ್ವಹಿಸಲಾಗುತ್ತಿರುತ್ತದೆ.

5. 2020 ಏಪ್ರಿಲ್ ರಿಂದ ಫೆಬ್ರವರಿ-2021 ರವರೆಗೂ ಪಾಲಿಕೆಯ ವ್ಯಾಪ್ತಿಯಲ್ಲಿನ ಬೀದಿ ನಾಯಿಗಳಿಗೆ ರೇಬಿಸ್ ರೋಗದ ವಿರುದ್ಧ ಲಸಿಕೆ ಹಾಕಿರುವ ವಲಯವಾರು ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ವಲಯ	ಏಪ್ರಿಲ್-2020 ರಿಂದ ಫೆಬ್ರವರಿ-2021 ರವರೆಗೆ ರೇಬಿಸ್ ರೋಗ ವಿರುದ್ಧ ಲಸಿಕೆ ಮಾಡಲಾದ ಬೀದಿ ನಾಯಿಗಳ ಸಂಖ್ಯೆ	ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿದ ಸಮಯದಲ್ಲಿ ರೇಬಿಸ್ ರೋಗ ವಿರುದ್ಧ ಲಸಿಕೆ ಹಾಕಿದ ಬೀದಿ ನಾಯಿಗಳ ಸಂಖ್ಯೆ	ಒಟ್ಟು ರೇಬಿಸ್ ರೋಗ ವಿರುದ್ಧ ಲಸಿಕೆ ಮಾಡಲಾದ ಬೀದಿ ನಾಯಿಗಳ ಸಂಖ್ಯೆ
1	ಮಹದೇವಪುರ	7193	7144	14337

2	ಯಲಹಂಕ	6752	3726	10478
3	ರಾಜರಾಜೇಶ್ವರಿನಗರ	8393	6953	15346
4	ಬೊಮ್ಮನಹಳ್ಳಿ	222	2612	2834
5	ಪೂರ್ವ	3455	3643	7098
6	ಪಶ್ಚಿಮ	2073	4694	6767
7	ದಕ್ಷಿಣ	3991	4720	8711
8	ದಾಸರಹಳ್ಳಿ	8588	5085	13673

ಸಂಖ್ಯೆ: ನಅಇ 79 ಎಂಎನ್‌ವೈ 2021 (ಇ)

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ